SEVA BHARATHI
सेवा ही परमो धर्मः

ಸಂಚಿಕೆ : 03
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ|| ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ - ಮಾರ್ಚ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-||, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಸೇವಾಭಾರತಿಯ 18ನೇ ವರ್ಷದ ಸಂಭ್ರಮ ಹಾಗೂ ಬೆಂಗಳೂರಿನ ಕೆಮ್‌ಟ್ರೆಂಡ್ ಕೆಮಿಕಲ್ಸ್ ಕಂಪೆನಿಯಿಂದ ಉಪಕರಣಗಳ ಹಸ್ತಾಂತರ



## ಅಮೆಜಾನ್ ವತಿಯಿಂದ ಗಾಲಿಕುರ್ಚಿ ಮತ್ತು ಮೆಡಿಕಲ್ ಕಿಟ್ ಹಸ್ತಾಂತರ

## ಕೊಪ್ಪದಲ್ಲಿ ವೀಲ್‌ಚೇರ್ ಮತ್ತು ಸೆಲ್ಫ್‌ಕೇರ್‌ಕಿಟ್ ವಿತರಣೆ ಸಮಾರಂಭ

## ಪ್ರೇರಣಾತ್ಮಕ ಜೀವನ ಶೈಲಿಗೆ ಬದಲಾದ ಬೆಂಗಳೂರಿನ ಗಿರೀಶ್

## ಸೇವಾಭಾರತಿ ಸಂಸ್ಥೆಯ 2022-23ರ ಮುಖ್ಯಾಂಶಗಳು

## ಅರ್ಹ ಫಲಾನುಭವಿಗಳಿಗೆ ಉಪಕರಣಗಳ ಹಸ್ತಾಂತರ

## ಸೇವಾಧಾಮದ ಸನಿವಾಸಿಗಳ ಪ್ರವಾಸ

ಜೀವನದಲ್ಲಿ ಅನಿರೀಕ್ಷಿತ ತಿರುವು ಬಂದಾಗ ನೆರವಾದ ಗಣಕಯಂತ್ರ
ತಂತ್ರಜ್ಞಾನದ ಕೌಶಲ್ಯ: ನಿಶಾಂತ್ ಅಜ್ಜಾವರರ ಛಲದ ಕಥೆ

## ನಮ್ಮಿಂದಿಷ್ಟು

ಆರ್ಥಿಕ ವರ್ಷದ ಕೊನೆಯ ತಿಂಗಳು ಮಹತ್ತರ ಕೆಲಸವೊಂದು ಘಟಿಸಿದೆ. 10 ವರ್ಷಗಳ ಪರಿಶ್ರಮ, ಜನಪ್ರತಿನಿಧಿಗಳ, ಸಂಘ ಪ್ರಮುಖರ, ಕಾರ್ಯಕರ್ತರ ಸಹಕಾರ ಗಳಿಂದ ಹತ್ತು ಸೆಂಟ್ಸ್ ಜಾಗವು ನಮ್ಮ ಕನ್ಯಾಡಿಯ ಹೃದಯ ಭಾಗದಲ್ಲಿ ದೊರಕಿರುವುದು.

ಅದೇ ರೀತಿ ಚಿಕ್ಕ ಮತ್ತು ಚೊಕ್ಕವಾಗಿ ಸಂಸ್ಥೆಯ 18ನೇ ವಾರ್ಷಿಕ ಸಂಭ್ರಮವನ್ನಾಚರಿಸಿರುವುದು ಉಲ್ಲೇಖನೀಯ ಸಂಗತಿ. ಕೆಮ್‌ಟ್ರೆಂಡ್ ಕೆಮಿಕಲ್ ಪ್ರೈವೇಟ್ ಲಿಮಿಟೆಡ್‌ನ ಸಿ.ಇ.ಓ. ಆದ ಶ್ರೀಯುತ ರಾಜೇಶ್ ಫಡ್ಕೆಯವರು ಒಬ್ಬ ವಿನಯವಂತ, ಮೃದುವಾಗ್ಮಿ, ಅಷ್ಟೇ ಸಾಮಾಜಿಕ ಕಳಕಳಿ ಹೊಂದಿದ ಮಹೋನ್ನತ ಮಾನವತಾವಾದಿ. ಕಳೆದ 3 ವರ್ಷಗಳಿಂದ ನಮ್ಮ ಸೇವೆಗಳಿಗೆ ನಿರಂತರ ಬೆನ್ನೆಲುಬಾಗಿ ನಿಂತು ಧೈರ್ಯ ತುಂಬಿದವರು. ಈ ವರ್ಷದ ಧನ ಸಹಾಯದಲ್ಲಿ ಫಲಾನುಭವಿ ಗಳಿಗೆ ಸಹಾಯಗಳನ್ನು ಒದಗಿಸಲು, ಮತ್ತು ನಮ್ಮ ಸಂಸ್ಥೆಗೆ ಕೇಂದ್ರದ ಉನ್ನತೀಕರಣ ವ್ಯವಸ್ಥೆಯನ್ನು ಕೈಗೊಳ್ಳಲು ಸಾಧ್ಯವಾಯಿತು. ಒಟ್ಟಿನಲ್ಲಿ ರಾಜ್ಯದಲ್ಲೇ ಒಂದು ಮಾದರಿ ಕೇಂದ್ರವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಆದ ಕಾರಣ ಅವರಿಗೂ ಅವರ ಸಿ.ಎಸ್.ಆರ್. ತಂಡದ ಸಿಬ್ಬಂದಿಗಳಿಗೆಲ್ಲರಿಗೂ ನಾವು ಎಷ್ಟು ಅಭಿನಂದನೆ ಸಲ್ಲಿಸಿದರೂ ಕಡಿಮೆಯೇ. ಅದಕ್ಕಾಗಿ ನಾವೆಲ್ಲ ಋಣಿಗಳು ಎನ್ನುತ್ತೇವೆ.

ಮಾರ್ಚ್ ತಿಂಗಳಲ್ಲಿ ಫಲಾನುಭವಿಗಳಿಗೆ ಒಂದು ರೀತಿ ಬಂಪರ್ ಸೇವೆಗಳು ಲಭಿಸಿವೆ ಎಂದರೂ ತಪ್ಪಿಲ್ಲ. ಬೆಂಗಳೂರಿನ ಗಿಫ್ಟ್ ಏಬಲ್ಡ್, ಅಮೇಜಾನ್ ಮತ್ತು ಕ್ಯಾಪ್ಚೋ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್‌ನವರು ಗಾಲಿಕುರ್ಚಿ, ಸೆಲ್ಫ್‌ಕೇರ್ ಕಿಟ್, ಮೆಡಿಕಲ್ ಕಿಟ್‌ಗಳಿಗೆ ಧನಸಹಾಯ ನೀಡಿ ಕೈಜೋಡಿಸಿರುವುದು ಮತ್ತು ಅದನ್ನು ಮನೆಮನೆಗೆ ತಲುಪಿಸಲು ಅದೂ 6 ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಿಬ್ಬಂದಿಗಳು ಪ್ರವಾಹ ದೋಪದಿಯಲ್ಲಿ ಶ್ರಮಿಸಿರುತ್ತಾರೆ. ಇದೂ ಕೂಡ ಶ್ಲಾಘನೀಯ ಮತ್ತು ಸಿಬ್ಬಂದಿಗಳ ಬದ್ಧತೆ ಮತ್ತು ಅವರಿಗೆ ಸೇವೆಯಲ್ಲಿರುವ ಆತ್ಮಸಂತೋಷವೇ ಕಾರಣ ಎನ್ನಬಹುದು.

ಒಟ್ಟಿನಲ್ಲಿ 2021–22ರ ಸೇವಾವರದಿಯನ್ನು ಒಪ್ಪಿಸು ತ್ತಿದ್ದೇವೆ. ವಾರ್ಷಿಕ ಟಾರ್ಗೆಟ್‌ನ್ನು ಮೀರಿ ಕೆಲಸ ಮಾಡಿದ ಸಿಬ್ಬಂದಿಗಳೂ, ಅವರಿಗೆ ಬೆನ್ನೆಲುಬಾಗಿ ಸಹಕರಿಸಿದ ಸಲಹಾ ಮಂಡಳಿ ಸದಸ್ಯರೂ, ಟ್ರಸ್ಟಿಗಳೂ, ದಾನಿಗಳು, ಸಿಎಸ್‌ಆರ್ ತಂಡಗಳು, ಸರಕಾರಿ ಸಂಸ್ಥೆಗಳೂ ಯಶಸ್ಸಿಗೆ ಕಾರಣೀಕರ್ತರು.

ಸೇವೆಯು ನಿತ್ಯಕಾಯಕವಾಗಬೇಕು. ಅದು ಪ್ರತಿ ಯೊಬ್ಬನ ಜೀವನದಲ್ಲಿ ಅನುಸರಿಸಬೇಕು. ಆಗಲೇ ಮಾನವತೆ ಮತ್ತು ಪ್ರಕೃತಿ ನಿಯಮದ ಅನುಷ್ಠಾನಗೊಂಡಂತೆ. ನಡೆದಂತೆ ನುಡಿಯು ವುದು ಮತ್ತು ನುಡಿದಂತೆ ನಡೆಯುವುದೇ ಬಾಳಿನ ಮರ್ಮ. ಆ ಮೂಲಕ ಮಾನವ ಮಾಧವನಾಗುವುದು, ನರ–ನಾರಾಯಣ ನಾಗುವುದು. ಅದು ಸೇವೆಯಲ್ಲಿ ನಮ್ಮ ಧ್ಯೇಯವಾಕ್ಯವೂ ಅದೇ ತಾನೆ.

॥ ಸೇವಾ ಹಿ ಪರಮೋ ಧರ್ಮಃ ॥

ಇತೀ ತಮ್ಮವ,

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಶ್ರೀಮತಿ ಮನೋರಮ ಭಟ್
3. ಶ್ರೀ ಉದಯಶಂಕರ್
4. ಶ್ರೀ ಹರೀಶ್ ಟಿ. ಪಿ.
5. ಶ್ರೀ ಗೋಪಾಲ ಕೆ. ವಿ.
6. ಶ್ರೀಮತಿ ಜೊಯ್ಸ್ ಪಿರೇರಾ
7. ಶ್ರೀ ರಜತ್‌ರಾವ್, ಧರ್ಮಸ್ಥಳ
8. ಶ್ರೀ ವಿಜಯ ಕೊಡವೂರು
9. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

*I dont need easy, I just need possible*

# ಸೇವಾಭಾರತಿಯ 18ನೇ ವರ್ಷದ ಸಂಭ್ರಮ ಹಾಗೂ ಬೆಂಗಳೂರಿನ ಕೆಮ್‌ಟ್ರೆಂಡ್ ಕೆಮಿಕಲ್ಸ್ ಕಂಪೆನಿಯಿಂದ ಉಪಕರಣಗಳ ಹಸ್ತಾಂತರ



**ಸೌತಡ್ಕ :** ಸೇವಾಭಾರತಿಯ 18 ನೇ ವರ್ಷದ ವಾರ್ಷಿಕ ಸಂಭ್ರಮ ಹಾಗೂ ಕೆಮ್‌ಟ್ರೆಂಡ್ ಕೆಮಿಕಲ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನಿಂದ ಕೇಂದ್ರಕ್ಕೆ ಉಪಕರಣಗಳ ಹಸ್ತಾಂತರ ಕಾರ್ಯಕ್ರಮವನ್ನು ಮಾರ್ಚ್ 30 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಸೇವಾಭಾರತಿಯ ಖಜಾಂಚಿ ಕೆ. ವಿನಾಯಕ ರಾವ್ ಅವರು ಸಂಸ್ಥೆಯ ಕಾರ್ಯಚಟುವಟಿಕೆಯ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮವನ್ನು ಕೆಮ್‌ಟ್ರೆಂಡ್ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಓ ರಾಜೇಶ್ ಫಡ್ಕೆ ಉದ್ಘಾಟಿಸಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮತ್ತು ಇವರು ಸಿಎಸ್‌ಆರ್ ಯೋಜನೆಯಡಿ ಸೇವಾಧಾಮಕ್ಕೆ 1 ಸ್ಟೇರ್‌ಕೇಸ್ ವಿತ್ ರ‍್ಯಾಂಪ್, 10 ಕಾಟ್ ಅಂಡ್ ಮ್ಯಾಟರ್ಸ್, 1 ಪ್ರೊಜೆಕ್ಟರ್, 1 ಯುಪಿಎಸ್ ಯೂನಿಟ್ ಹಾಗೂ 1 ಟ್ರೆಡ್ಮಿಲ್ ವಿತ್ ಬಾಡಿವೈಟೆಡ್ ಸಪೋರ್ಟನ್ನು ಹಸ್ತಾಂತರಿಸಿದರು. ಹಾಗೆಯೇ ಫಲಾನುಭವಿಗಳಿಗೆ 10 ವಾಟರ್‌ಬೆಡ್ ಹಾಗೂ 5 ಗಾಲಿಕುರ್ಚಿ ನೀಡುತ್ತಿದ್ದು ಸಾಂಕೇತಿಕವಾಗಿ 1 ಗಾಲಿಕುರ್ಚಿಯನ್ನು ಲಿಂಗಪ್ಪ ಗುತ್ತಿಗಾರು ಹಾಗೂ 1 ವಾಟರ್‌ಬೆಡ್‌ನ್ನು ರಾಮಣ್ಣ ಕಾಯರ್ತಡ್ಕ ಅವರಿಗೆ ಕಾರ್ಯಕ್ರಮದಲ್ಲಿ ನೀಡಲಾಯಿತು.

ನಂತರ 2021–2022 ನೇ ವರ್ಷದ ವಾರ್ಷಿಕ ವರದಿಯನ್ನು ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್ ಬಿಡುಗಡೆ ಮಾಡಿದರು. ಸೇವಾಭಾರತಿಯ ಕಾರ್ಯದರ್ಶಿ ಬಾಲಕೃಷ್ಣ ವರದಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾದಂತಹ ಶ್ರೀಮತಿ ಶಾಂತಕುಮಾರಿ ನಿವೃತ್ತ ಸೀನಿಯರ್ ಸುಪರಿಟೆಂಡೆಂಟ್‌ರವರು ಕಾರ್ಯಕ್ರಮವನ್ನುದ್ದೇಶಿಸಿ ಹಾಗೂ ಸಂಸ್ಥೆಯ ಕಾರ್ಯಾಚಟುವಟಿಕೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ನಂತರ ಲಕ್ಷ್ಮಿನಾರಾಯಣ ರಾವ್ ಪಾರು ಪತ್ಯಾಗಾರರು ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಭುಜಬಲಿ ಮುತ್ಸದ್ದಿ, ಶ್ರೀಕ್ಷೇತ್ರ ಧರ್ಮಸ್ಥಳ ಅವರು ಸಂಸ್ಥೆಯನ್ನುದ್ದೇಶಿಸಿ ಹಿತನುಡಿಗಳನ್ನಾಡಿದರು. ಸೇವಾಧಾಮದ ಸಂಚಾಲಕರು ಕೆ. ಪುರಂದರ ರಾವ್ ಹಾಗೂ ಕೃಷ್ಣಭಟ್ ಅಧ್ಯಕ್ಷರು ಸೌತಡ್ಕ ಶ್ರೀ ಮಹಾಗಣಪತಿ ಸೇವಾಟ್ರಸ್ಟ್ (ರಿ.), ಇವರು ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ನಂತರ ಜೋಯ್ಸ್ ಫಿರೇರಾ, ಸದಸ್ಯರು ಸಲಹಾ ಸಮಿತಿ ಸೇವಾಭಾರತಿ, ಸಂಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೆಯೇ ಸೇವಾಧಾಮದ ಎಲ್ಲಾ ಸನಿವಾಸಿಗಳು ತಮ್ಮ ಪರಿಚಯ ಹಾಗೂ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿನ ಚಟುವಟಿಕೆಗಳ ಬಗ್ಗೆ ತಮ್ಮ ಅನುಭವ, ಅನಿಸಿಕೆಗಳನ್ನು ಹೇಳಿದರು.

ವಾರ್ಷಿಕ ಸಂಭ್ರಮದಲ್ಲಿ ಸಂಸ್ಥೆಯ ಸಿಬ್ಬಂದಿವರ್ಗವನ್ನು ವೇದಿಕೆಗೆ ಆಹ್ವಾನಿಸಿ ಅವರ ಪರಿಚಯ ಹಾಗೂ ಅವರ ಹುದ್ದೆಯನ್ನು ಸಂಸ್ಥೆಯ ಖಜಾಂಚಿ ಕೆ.ವಿನಾಯಕ ರಾವ್ ಹೇಳಿ ಪ್ರೇರೇಪಿಸಿದರು.

ಸಿ.ಎಸ್.ಆರ್ ಯೋಜನೆಯಡಿ ಸತತವಾಗಿ 3 ವರ್ಷಗಳಿಂದ ಸೇವಾಭಾರತಿ ಸಂಸ್ಥೆಗೆ ಬೆಂಬಲಿಸುತ್ತಾ ಬರುತ್ತಿರುವ ಕೆಮ್‌ಟ್ರೆಂಡ್ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಓ ರಾಜೇಶ್ ಫಡ್ಕೆ ಅವರನ್ನು ಕೃಷ್ಣ ಭಟ್ ಅಧ್ಯಕ್ಷರು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಸಂಸ್ಥೆಯಿಂದ ಗೌರವಿಸಿದರು.

ಸಂಸ್ಥೆಗೆ ಹೆಚ್ಚು ಸಿ.ಎಸ್.ಆರ್. ನಿಧಿಯನ್ನು ತಂದುಕೊಟ್ಟದ್ದಕ್ಕಾಗಿ ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರಾದ ಆಶ್ರಿತ್ ಸಿ.ಪಿ. ಅವರನ್ನು ಸಂಸ್ಥೆಯ ಪರವಾಗಿ ಸ್ವರ್ಣಗೌರಿ, ಅಧ್ಯಕ್ಷರು ಸೇವಾಭಾರತಿ ಅವರು ಸನ್ಮಾನಿಸಿದರು.

ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವಂತಹ ಸ್ವರ್ಣಗೌರಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮವನ್ನು ಸಂಸ್ಥೆಯ ಡಾಕ್ಯುಮೆಂಟ್ ಸಂಯೋಜಕಿಯಾದ ಕು. ಅಪೂರ್ವ ಪಿ.ವಿ. ನಿರೂಪಿಸಿದರು. ಸಂಸ್ಥೆಯ ಟ್ರಸ್ಟಿ ವಿಷ್ಣುಪ್ರಸಾದ್ ತೆಂಕಿಲ್ಲಾಯ ಸ್ವಾಗತಿಸಿ ಕಾರ್ಯಕ್ರಮ ಸಂಯೋಜಕರಾದ ಆಶ್ರಿತ್ ಸಿ.ಪಿ. ಧನ್ಯವಾದವಿತ್ತರು.

## ದಾನಿಗಳು

# ಅಮೆಜಾನ್ ವತಿಯಿಂದ ಗಾಲಿಕುರ್ಚಿ ಮತ್ತು ಮೆಡಿಕಲ್ ಕಿಟ್ ಹಸ್ತಾಂತರ




ಸೌತಡ್ಕ : ಸೇವಾಭಾರತಿ–ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ಗಾಲಿಕುರ್ಚಿ ಮತ್ತು ಮೆಡಿಕಲ್‌ಕಿಟ್ ಹಸ್ತಾಂತರ ಕಾರ್ಯಕ್ರಮವನ್ನು ಮಾರ್ಚ್ 25 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಆಯೋಜಿಸಲಾಯಿತು. ಸೇವಾಭಾರತಿಯ ಖಜಾಂಚಿಯಾದ ಕೆ.ವಿನಾಯಕ ರಾವ್‌ರವರು ಸಂಸ್ಥೆಯ ಕಾರ್ಯಚಟುವಟಿಕೆಯ ಬಗ್ಗೆ ಪ್ರಾಸ್ತಾವಿಕ ನುಡಿಯನ್ನಾಡಿದರು. ಕಾರ್ಯಕ್ರಮವನ್ನು ಅಮೆಜಾನ್‌ನ ಸೀನಿಯರ್ ಟೆಕ್ನಿಕಲ್ ಪ್ರೋಗ್ರಾಮ್ ಮ್ಯಾನೇಜರ್ ಪ್ರಶಾಂತ್ ಪುತ್ತೂರು ಉದ್ಘಾಟಿಸಿ ಸೇವಾಭಾರತಿಯ ಸೇವಾಕಾರ್ಯಗಳು ಹಾಗೂ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಿಗೆ ಬೇಕಾಗುವ ದಿನನಿತ್ಯದ ಆರೋಗ್ಯ ಕಿಟ್‌ನ್ನು ವಿತರಿಸುತ್ತಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಬೆಳ್ತಂಗಡಿ ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷರಾದ ಹೃಷಿಕೇಶ ರವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಜೀವನ ಬದಲಾವಣೆ ಶೈಲಿಗೆ ಸೇವಾಧಾಮ ಕೇಂದ್ರ ಮುಖ್ಯ ಪಾತ್ರ ನಿರ್ವಹಿಸುತ್ತಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ನೀಡಿದ ಸಾಧನ ಸಲಕರಣೆಗಳನ್ನು ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಿಗೆ ಪ್ರಾಮಾಣಿಕವಾಗಿ ಸಮುದಾಯ ಹಾಗೂ ಪುನಶ್ಚೇತನ ಕೇಂದ್ರದಲ್ಲಿ ಹಸ್ತಾಂತರಿಸಲು ಸಹಾಯಧನ ನೀಡಿದಕ್ಕೆ ಧನ್ಯವಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ದೇರಳಕಟ್ಟೆ ಮಂಗಳೂರು ಕೆಎಸ್. ಹೆಗ್ಡೆ ಹಾಸ್ಪಿಟಲ್‌ನ ಅಸಿಸ್ಟೆಂಟ್ ಪ್ರೊಫೆಸರ್ ಅಂಡ್ ಹೆಡ್ ಆಫ್ ದ ಡಿಪಾರ್ಟ್‌ಮೆಂಟ್ ಡಾಕ್ಟರ್ ಸುನಿಲ್‌ರವರು ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ದೊರಕುವ ಮೆಡಿಕಲ್ ಕಿಟ್‌ನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವಂತೆ ಸಲಹೆ ನೀಡಿದರು. ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಸೇವಾಧಾಮದಿಂದ ದೊರಕುವ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳ ಬೇಕೆಂದು ಹೇಳಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಸೇವಾಭಾರತಿಯ ಕಾರ್ಯದರ್ಶಿ ಬಾಲಕೃಷ್ಣ, ಸಂಚಾಲಕರಾದ ಪುರಂದರ ರಾವ್, ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಅಧ್ಯಕ್ಷರಾದ ಕೃಷ್ಣಭಟ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಿಬ್ಬಂದಿಗಳಾದ ಮೋಹನ್ ನಿರೂಪಿಸಿ, ಪುಷ್ಪಲತಾ ಸ್ವಾಗತಿಸಿ, ಶೈಲಾ ಧನ್ಯವಾದವಿತ್ತರು.

ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ಒಟ್ಟು 6 ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ 5 ಗಾಲಿಕುರ್ಚಿ, 10 ಕಾಮೊಡೋ ಗಾಲಿಕುರ್ಚಿ, ತಲಾ 50 ಬಿಪಿ ಮತ್ತು 50 ಗ್ಲುಕೋಮೀಟರ್, 25 ಸೆಲ್ಫ್‌ಕೇರ್ ಕಿಟ್, 20 ವಾಟರ್‌ಬೆಡ್ ಹಾಗೂ ಕೇಂದ್ರಕ್ಕೆ 1 ಲ್ಯಾಪ್‌ಟಾಪ್, 1 ಪ್ರೊಜೆಕ್ಟರ್, 1 ಯುಪಿಎಸ್ ಯೂನಿಟ್, 25 ಬೆಡ್‌ಶೀಟನ್ನು ಹಸ್ತಾಂತರಿಸಲಾಯಿತು. 6 ವಿವಿಧ ಜಿಲ್ಲೆಗಳ ಒಟ್ಟು 1105 ಫಲಾನುಭವಿಗಳು ಪ್ರಯೋಜನ ಪಡೆದಿರುವುದು ಸಂತೋಷಕರ ವಿಷಯ.

## ಮಾರ್ಚ್ ತಿಂಗಳಿನಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಎಸಿಇ ಮ್ಯಾನುಫ್ಯಾಕ್ಚರಿಂಗ್ ಸಿಸ್ಟಮ್ ಲಿಮಿಟೆಡ್, ಬೆಂಗಳೂರು
ಕ್ಯಾಪ್ಕೋ ಟೆಕ್ನಾಲೋಜಿಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು
ಗಿಫ್ಟ್ ಏಬಲ್ಡ್ ಫೌಂಡೇಶನ್, ಬೆಂಗಳೂರು
ಪ್ರಶಮನಿ ಚಾರಿಟೇಬಲ್ ಟ್ರಸ್ಟ್, ಕೊಪ್ಪ
ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಬೆಂಗಳೂರು

## ಮಹನೀಯ ದಾನಿಗಳು

ಶ್ರೀ ದಿವಾಕರ ಆಚಾರ್, ಕಲ್ಮಂಜ
ಶ್ರೀ ಬಿ. ನವೀನ್‌ಚಂದ್ರ, ಧರ್ಮಸ್ಥಳ
ಶ್ರೀ ಗೋಪಾಲಕೃಷ್ಣಯ್ಯ, ಬೆಂಗಳೂರು
ಶ್ರೀ ಡಿ.ಎಂ.ಗೌಡ, ಉಜಿರೆ
ಶ್ರೀ ಕೆ. ಪ್ರಭಾಕರ ನಾಯರ್, ಸುಳ್ಯ
ಶ್ರೀ ರಾಮಚಂದ್ರ ಪೆರಿಯಡ್ಕ, ಸುಳ್ಯ
ಶ್ರೀ ಪರಮೇಶ್ವರ ಎಂ., ಉಜಿರೆ
ಶ್ರೀಮತಿ ಗಾಯತ್ರಿ ಕೇತನ್ ಪ್ರಧಾನ್, ಮುಂಬೈ
ಕು. ಬಿಂಧ್ಯಾ ಆರ್., ಪುತ್ತೂರು
ಶ್ರೀ ಲಕ್ಷ್ಮಿನಾರಾಯಣ ರಾವ್, ಧರ್ಮಸ್ಥಳ
ಕು. ಪೃಥ್ವಿ ಕೆ., ಕೊಕ್ಕಡ
ಶ್ರೀ ರಾಘವೇಂದ್ರ ಬೈಪಾಡಿತ್ತಾಯ, ಉಜಿರೆ
ಕು. ಅಂಜನಾದೇವಿ ಬಿ, ಉಜಿರೆ
ಶ್ರೀ ವಿಠಲ ಪ್ರಭು, ಉಡುಪಿ
ಶ್ರೀ ಆದಿತ್ಯ ಭಾರ್ಗವ, ಬೆಂಗಳೂರು
ಶ್ರೀ ಶ್ರೀನಿವಾಸ್, ಉಜಿರೆ
ಶ್ರೀ ಚಂದ್ರಶೇಖರ್, ಸುಳ್ಯ

## ಸೇವಾನಿಧಿ ದಾನಿಗಳು

ಶ್ರೀ ಮಧ್ವಮೂರ್ತಿ ಪಿ., ಉಡುಪಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಮಾಸ್ಟರ್ ಅದ್ವೈತ ಪೈ, ಕನ್ಯಾಡಿ
ಶ್ರೀಮತಿ ಛಾಯಾ ಸಿ.ಎಸ್., ಉಜಿರೆ
ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ಪುರುಷೋತ್ತಮ ಡಿ.ಎ. ಧರ್ಮಸ್ಥಳ
ಶ್ರೀ ಲಕ್ಷ್ಮಿನಾರಾಯಣ ರಾವ್ ಧರ್ಮಸ್ಥಳ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಬಿ. ಪುರಂದರ ನಾರ್ಯ
ಶ್ರೀ ಸುನಿಲ್ ಕುಮಾರ್ ಜೈನ್, ಧರ್ಮಸ್ಥಳ
ಶ್ರೀ ರಜತ್ ಕುಮಾರ್ ಜೆ.ಡಿ., ವೇಣೂರು

# ಕೊಪ್ಪದಲ್ಲಿ ವೀಲ್‌ಚೇರ್ ಮತ್ತು ಸೆಲ್ಫ್‌ಕೇರ್‌ಕಿಟ್ ವಿತರಣೆ ಸಮಾರಂಭ




ಅಮೆಜಾನ್ ಎಂಪ್ಲೋಯಿ ಗ್ರಾಂಟ್‌ನಡಿ, ಸೇವಾಭಾರತಿ ಕನ್ಯಾಡಿ, ಪ್ರಶಮನಿ ಟ್ರಸ್ಟ್ ಮತ್ತು ರೋಟರಿ ಕ್ಲಬ್ ಕೊಪ್ಪ ಇವರ ಸಹಯೋಗದೊಂದಿಗೆ ವೀಲ್‌ಚೇರ್ ಮತ್ತು ಸೆಲ್ಫ್‌ಕೇರ್‌ಕಿಟ್ ವಿತರಣೆ ಸಮಾರಂಭ ಕೊಪ್ಪ ಪ್ರಶಮನಿ ಆಸ್ಪತ್ರೆಯ ಸಭಾಂಗಣದಲ್ಲಿ ನಡೆಯಿತು

ಪ್ರಶಮನಿ ಆಸ್ಪತ್ರೆಯ ಸಭಾಂಗಣದಲ್ಲಿ ರೋಟರಿ ಕ್ಲಬ್ ಕೊಪ್ಪ, ಪ್ರಶಮನಿ ಟ್ರಸ್ಟ್, ಸೇವಾಭಾರತಿ ಕನ್ಯಾಡಿ ಇವರ ಸಹಯೋಗದೊಂದಿಗೆ ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ವೀಲ್‌ಚೇರ್ ವಿತರಣೆ ಮತ್ತು ಸೆಲ್ಫ್‌ಕೇರ್ ಕಿಟ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಅಧ್ಯಕ್ಷರಾದ ರೊ। ಸುಕೇಶ್.ಎನ್.ಪಿ. ಅವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಚರಣ್‌ಕುಮಾರ್ ದೀಪ ಬೆಳಗಿಸುವ ಮೂಲಕ ನೆರವೇರಿಸಿದರು. ಕಾರ್ಯಕ್ರಮದ ಬಗ್ಗೆ ಸವಿಸ್ತಾರವಾಗಿ ರೊ। ಡಾಕ್ಟರ್ ಉದಯಶಂಕರ್‌ರವರು ಪ್ರಾಸ್ತಾವಿಕವಾಗಿ ಮಾತನ್ನಾಡಿದರು. ವೇದಿಕೆಯಲ್ಲಿ ಜೋನ್ ಲೆಫ್ಟಿನೆಂಟ್ ರೊ। ರಮೇಶ್.ಎಮ್.ಆರ್., ನಿಕಟಪೂರ್ವ ಅಧ್ಯಕ್ಷರಾದ ರೊ। ರೇಖಾ ಉದಯಶಂಕರ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕನ್ಯಾಡಿ ಸೇವಾಭಾರತಿಯ ಶ್ರೀ ಆಶ್ರಿತ್ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ 15 ಮಂದಿ ಫಲಾನುಭವಿಗಳು ಭಾಗವಹಿಸಿ ಸೆಲ್ಫ್‌ಕೇರ್ ಕಿಟ್‌ಗಳನ್ನು ಪಡೆದುಕೊಂಡರು. 03 ಜನ ಫಲಾನುಭವಿಗಳಿಗೆ ವೀಲ್‌ಚೇರನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳ ಕುಟುಂಬದವರು ಮತ್ತು ರೋಟರಿಕ್ಲಬ್‌ನ ಸದಸ್ಯರು ಭಾಗವಹಿಸಿದ್ದರು. ಜೊತೆಗೆ ಪ್ರಶಮನಿ ಆಸ್ಪತ್ರೆಯ ಸಿಬ್ಬಂದಿಗಳು ಪತ್ರಿಕಾ ವರದಿಗಾರರಾದ ಜಲಂಧರ್, ವಿಶ್ವ, ಅರುಣ್‌ಸಾಗರ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದರು.



# ಪ್ರೇರಣಾತ್ಮಕ ಜೀವನ ಶೈಲಿಗೆ ಬದಲಾದ ಬೆಂಗಳೂರಿನ ಗಿರೀಶ್




ಪುನಶ್ಚೇತನ ಕೇಂದ್ರಕ್ಕೆ ಬಂದ ನಂತರ ಎಲ್ಲರೊಂದಿಗೆ ಬೆರೆತು ತಮ್ಮ ದುಃಖಗಳನ್ನೆಲ್ಲಾ ಮರೆತು ಹಸನ್ಮುಖ ಜೀವನ ನಡೆಸುತ್ತಾ ತಮಗೆ ಸೇವಾಧಾಮ ಕೇಂದ್ರದಿಂದ ಪುನರ್ಜನ್ಮ ಲಭಿಸಿತು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಬದಲಾವಣೆ ಎಂಬುದು ಜಗದ ನಿಯಮವಿದ್ದಂತೆ. ಎಲ್ಲರಂತೆ ಸಾಮಾನ್ಯ ಜೀವನವನ್ನು ಸಾಗಿಸುತ್ತಿದ್ದ ಗಿರೀಶ್ ಜೀವನದಲ್ಲಿ 2019 ಫೆಬ್ರವರಿ 17 ರಂದು ದುರ್ಘಟನೆ ಸಂಭವಿಸಿತು. ಇವರು ಕಾರು ಅಪಘಾತದಿಂದ ಎರಡೂವರೆ ವರ್ಷ ಹಾಸಿಗೆ ಹಿಡಿದರು. ಕೈ ಕಾಲುಗಳ ಚಲನ–ವಲನಗಳು ಸಂಪೂರ್ಣ ನಿಂತು ಹೋಗಿತ್ತು. ನಂತರ ನಿಧಾನವಾಗಿ ಕೈ ಕಾಲುಗಳ ಚಲನೆ ಪ್ರಾರಂಭವಾಯಿತು. ನಂತರ ಇಬ್ಬರ ಸಹಾಯದಿಂದ ವಾಕರ್‌ನೊಂದಿಗೆ ನಡೆಯಲು ಪ್ರಾರಂಭಿಸಿದರು.

ಹೀಗೆ ಜೀವನ ಸಾಗುತ್ತಿದ್ದ ಸಮಯದಲ್ಲಿ ತಮ್ಮ ಚಿಕ್ಕಮಗಳೂರಿನ ಸ್ನೇಹಿತರಿಂದ ಸೇವಾಭಾರತಿ ಸೇವಾಧಾಮ ಪುನಶ್ಚೇತನ ಕೇಂದ್ರದ ಬಗ್ಗೆ ತಿಳಿದುಕೊಂಡರು. ಆ ಕ್ಷಣದಲ್ಲೇ ಸೇವಾಧಾಮ ಪುನಶ್ಚೇತನಕ್ಕೆ ಬಂದು ಪುನಶ್ಚೇತನ ಪಡೆದುಕೊಳ್ಳಬೇಕೆಂದು ಧೃಡ ನಿರ್ಧಾರ ಮಾಡಿದರು.

ನಂತರ 2023 ಜನವರಿ 12 ರಂದು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಪ್ರವೇಶ ಪಡೆದರು. ಕೇಂದ್ರದಲ್ಲಿ ನಿಧಾನವಾಗಿ ಚೇತರಿಸಿಕೊಳ್ಳುತ್ತಾ ಬಂದರು. ಇಬ್ಬರ ಸಹಾಯದಿಂದ ವಾಕರ್‌ನಲ್ಲಿ ನಡೆದಾಡುತಿದ್ದ ಗಿರೀಶ್ ಸ್ವತಃ ತಾವೇ ವಾಕರ್ ನೊಂದಿಗೆ ನಡೆಯಲು ಪ್ರಾರಂಭಿಸಿದರು. ತಾವೇ ಗಾಲಿಕುರ್ಚಿ ಸಹಾಯದಿಂದ ಸಂಚಾರಿಸುತ್ತಿದ್ದವರು ಗಾಲಿಕುರ್ಚಿಯನ್ನು ತಳ್ಳುವಷ್ಟು ಚೇತರಿಸಿಕೊಂಡರು.



## ಸೇವಾಭಾರತಿ ಸಂಸ್ಥೆಯ 2022–23ರ ಮುಖ್ಯಾಂಶಗಳು

1. ಸೇವಾಭಾರತಿ ಟಿ.ಸಿ.ಎಸ್ 10k ಮ್ಯಾರಥಾನ್ ಮೇ 15 2022 ರಂದು ಬೆಂಗಳೂರಿನ ಟಿ.ಸಿ.ಎಸ್ 10k ಮ್ಯಾರಥಾನ್‌ನಲ್ಲಿ ಬೆನ್ನುಹುರಿ ಅಪಘಾತದ ಜಾಗೃತಿಯ ಬಗ್ಗೆ ಜಾತಾ ನಡೆಯಿತು. ಒಟ್ಟು 21 ಮಂದಿ ಭಾಗವಹಿಸಿದ್ದರು. ಇದರಲ್ಲಿ 6 ದಿವ್ಯಾಂಗರು ಹಾಗೂ ಸಂಸ್ಥೆಯ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.
2. 2022ರ ವಿಶ್ವ ವಿಕಲಚೇತನರ ದಿನಾಚರಣೆಯ ಪ್ರಯುಕ್ತ ಸೇವಾ ಭಾರತಿ ಸೇವಾನಿಕೇತನ ಸಂಸ್ಥೆಗೆ ವಿಕಲಚೇತನರ ಕ್ಷೇತ್ರದಲ್ಲಿ ಸಂಸ್ಥೆಯ ವಿಶೇಷ ಸಾಧನೆಯನ್ನು ಪರಿಗಣಿಸಿ ಗೌರವಪೂರ್ವಕವಾಗಿ ರಾಜ್ಯಪ್ರಶಸ್ತಿ ನೀಡಿ ಡಿಸೆಂಬರ್ 3 ರಂದು ಸನ್ಮಾನಿಸಿದೆ.
3. **ಸೇವಾಸಂಗಮ–** ಆನ್‌ಲೈನ್ ಕಾರ್ಯಗಾರವನ್ನು ಪ್ರಾರಂಭಿಸ ಲಾಯಿತು. ಈ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಿಗೆ ವಿವಿಧ ವೈದ್ಯರಿಂದ ಮಾಹಿತಿ ಹಾಗೂ ಜಾಗ್ರತಿ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.
4. ವಿಶ್ವ ಬೆನ್ನುಹುರಿ ಅಪಘಾತದ ಪ್ರಯುಕ್ತ ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರಿನಲ್ಲಿ ದಿವ್ಯಾಂಗರು ಹಾಗೂ ಸಾಮಾನ್ಯ ಜನರಿಂದ ಜಾತಾ ಹಾಗೂ ಜಾಗ್ರತಿ ಕಾರ್ಯಕ್ರಮವನ್ನು ನಡೆಸುವುದರ ಮೂಲಕ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮೂಡಿಸಲಾಯಿತು.
5. ಸಮುದಾಯಾದರಿತ ಸೇವೆಯನ್ನು ಚಿಕ್ಕಮಗಳೂರು ಹಾಗೂ ಉತ್ತರಕನ್ನಡ ಜಿಲ್ಲೆಗೆ ವಿಸ್ತರಿಸಲಾಯಿತು.
6. **ಆರೋಗ್ಯಸ್ಪರ್ಶ:** ಆರೋಗ್ಯ ಇಲಾಖೆ ಉಡುಪಿಯ ಅಸೋಸಿಯೇಷನ್ ನೊಂದಿಗಿನ ವೈದ್ಯಕೀಯ ಸಹಾಯಕ್ಕಾಗಿ 108 ಆಂಬ್ಯುಲೆನ್ಸ್‌ನ್ನು ಮನೆಬಾಗಿಲಿಗೆ ಒದಗಿಸುವ ಪ್ರಯತ್ನ ಪ್ರಾರಂಭಿಸಲಾಗಿದೆ.
7. ಹೊಸ ವಿಶ್ವಸ್ಥ ಮಂಡಳಿಯನ್ನು ನೇಮಕಗೊಳಿಸಲಾಯಿತು. ಶ್ರೀಮತಿ ಸ್ವರ್ಣಗೌರಿ ಅವರನ್ನು ಅಧ್ಯಕ್ಷರನ್ನಾಗಿ, ಬಾಲಕೃಷ್ಣರವರನ್ನು ಕಾರ್ಯದರ್ಶಿ ಗಳಾಗಿ ಹಾಗೂ ಕೆ.ವಿನಾಯಕ ರಾವ್‌ರವರನ್ನು ಖಜಾಂಚಿಯನ್ನಾಗಿ ನೇಮಕಗೊಳಿಸಲಾಯಿತು.
8. **ಆರೋಗ್ಯ ಬಿಂದು:** ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅಗತ್ಯವಿರುವ ಸೆಲ್ಫ್ ಕೇರ್ ಕಿಟ್ (ಯೂರಿನ್ ಬ್ಯಾಗ್, ಕ್ಯಾತೆಟರ್, ಜೆಲ್) ಮತ್ತು ಮೆಡಿಕಲ್ ಕಿಟ್ ಅನ್ನು ಕನಿಷ್ಠ ದರದಲ್ಲಿ ಒದಗಿಸುವ ಪ್ರಯತ್ನ ಪ್ರಾರಂಭಿಸಲಾಗಿದೆ.

## ಸೇವಾಧಾಮದ ಸನಿವಾಸಿಗಳ ಪ್ರವಾಸ




**ಕೊಕ್ಕಡ :** ಮಾ.1 ರಂದು ಸೇವಾಧಾಮ ಬೆನ್ನುಹುರಿ ಅಪಘಾತ ಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರದ ಸನಿವಾಸಿಗಳಿಗೆ ಒಂದು ದಿನದ ಮನೋರಂಜನಾ ಪ್ರವಾಸವನ್ನು ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಮಂಗಳೂರಿನಲ್ಲಿ ಪಿಲಿಕುಳ ಪ್ರವಾಸೋದ್ಯಮ, ಕುದ್ರೋಳಿ ಗೋಕರ್ಣನಾಥೇಶ್ವರ ದೇವಸ್ಥಾನ ಮತ್ತು ಪಣಂಬೂರು ಸಮುದ್ರಕ್ಕೆ ಭೇಟಿ ನೀಡಲಾಯಿತು. ಪ್ರವಾಸದಲ್ಲಿ ಒಟ್ಟು 5 ಮಂದಿ ಸನಿವಾಸಿಗಳು ಹಾಗೂ 12 ಮಂದಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಸಂಸ್ಥೆಯ ಖಜಾಂಚಿ ಕೆ. ವಿನಾಯಕ ರಾವ್, ಕಾರ್ಯದರ್ಶಿ ಬಾಲಕೃಷ್ಣ ಜೊತೆಗಿದ್ದರು.

## ಅರ್ಹ ಫಲಾನುಭವಿಗಳಿಗೆ ಉಪಕರಣಗಳ ಹಸ್ತಾಂತರ




ಅಮೆಜಾನ್, ಕೆಮ್‌ಟ್ರೆಂಡ್ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಕ್ಯಾಪ್ಕೋ ಕಂಪನಿಯಿಂದ ಅರ್ಹ ಫಲಾನುಭವಿಗಳಿಗೆ ಉಪಕರಣಗಳ ಹಸ್ತಾಂತರ ಅಮೆಜಾನ್ ಎಂಪ್ಲೋಯೀ ಗ್ರಾಂಟ್‌ನಡಿ ಒಟ್ಟು 6 ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ 5 ಗಾಲಿಕುರ್ಚಿ, 10 ಕಾಮೊಡೋ ಗಾಲಿಕುರ್ಚಿ, ತಲಾ 50 ಬಿಪಿ ಮತ್ತು ಗ್ಲುಕೋಮೀಟರ್, 25 ಸೆಲ್ಫ್‌ಕೇರ್ ಕಿಟ್, 20 ವಾಟರ್‌ಬೆಡ್ ಹಾಗೂ ಕೇಂದ್ರಕ್ಕೆ 1 ಲ್ಯಾಪ್ಟಾಪ್, 1 ಪ್ರೊಜೆಕ್ಟರ್,1 ಯುಪಿಎಸ್ ಯೂನಿಟ್, 25 ಬೆಡ್‌ಶೀಟ್‌ನ್ನು ಫಲಾನು ಭವಿಗಳಿಗಳಿಗೆ ನೀಡಲಾಗುತ್ತಿದೆ.

ಸಿ.ಎಸ್.ಆರ್. ಯೋಜನೆಯಡಿ ಸೇವಾಧಾಮಕ್ಕೆ ಕೆಮ್‌ಟ್ರೆಂಡ್ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಕಂಪನಿಯು ಉಪಕರಣ ಗಳನ್ನು ಹಸ್ತಾಂತರಿಸಿದರು. ಇವರು ಕೇಂದ್ರಕ್ಕೆ 1 ಸ್ಟೇರ್‌ಕೇಸ್ ವಿತ್ ರ್‍ಯಾಂಪ್, 10 ಕಾಟ್ ಅಂಡ್ ಮ್ಯಾಟರ್ಸ್, 1 ಪ್ರೊಜೆಕ್ಟರ್, 1 ಯುಪಿಎಸ್ ಯೂನಿಟ್ ಹಾಗೂ 1 ಟ್ರೆಡ್ಮಿಲ್ ವಿಥ್ ಬೋಡಿ ವೈಟೆಡ್ ಸಪೋರ್ಟ್ ಅನ್ನು ಹಸ್ತಾಂತರಿಸಿದರು. ಹಾಗೆಯೇ ಫಲಾನುಭವಿಗಳಿಗೆ 10 ವಾಟರ್‌ಬೆಡ್ ಹಾಗೂ 5 ಗಾಲಿಕುರ್ಚಿಗಳನ್ನು ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ಕ್ಯಾಪ್ಕೋ ವತಿಯಿಂದ 20 ಗಾಲಿಕುರ್ಚಿ, 4 ಕಮೊಡೋ ಗಾಲಿಕುರ್ಚಿ 52 ಸೆಲ್ಫ್‌ಕೇರ್ ಕಿಟ್, 15 ಮೆಡಿಕಲ್ ಕಿಟ್‌ಅನ್ನು ಫಲಾನುಭವಿಗಳಿಗೆ ನೀಡಲಾಗುತ್ತಿದೆ.

## ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಗಾರ



**ಉಡುಪಿ:** ಸೇವಾಭಾರತಿ–ಸೇವಾಧಾಮದ ವತಿಯಿಂದ ಉಡುಪಿ ಧನ್ವಂತರಿ ಸ್ಕೂಲ್ ಆಫ್ ನರ್ಸಿಂಗ್(ಬಿ.ಎಸ್ಸಿ) ಧನ್ವಂತರಿ ಸ್ಕೂಲ್ ಆಫ್ ನರ್ಸಿಂಗ್ (ಜಿಎನ್ಎಫ್) ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಗಾರವನ್ನು ಮಾರ್ಚ್ 15 ರಂದು ಆಯೋಜಿಸಲಾಯಿತು.


ಸೇವಾಭಾರತಿ ಉಡುಪಿ ಜಿಲ್ಲೆಯ ಹಿರಿಯ ಕ್ಷೇತ್ರ ಸಂಯೋಜಕರಾದ ಮನು ಆರ್. ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣಾ ಕ್ರಮ ಹಾಗೂ ದ್ವಿತೀಯಾಂತರ ಸಮಸ್ಯೆಗಳನ್ನು ತಡೆಯಲು ಮುನ್ನೆಚರಿಕಾ ಕ್ರಮಗಳನ್ನು ವಹಿಸುವ ಬಗ್ಗೆ ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ಧನ್ವಂತರಿ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶಿವಪ್ರಸಾದ ಪ್ರಭು, ಪ್ರಾಧ್ಯಾಪಕರಾದ ಜ್ಯೋತಿ ಮಾಹಿತಿ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು. ಒಟ್ಟು 52 ವಿದ್ಯಾರ್ಥಿಗಳು ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಪ್ರಾಧ್ಯಾಪಕರಾದ ಜ್ಯೋತಿ ನಿರೂಪಿಸಿ, ಸ್ವಾಗತಿಸಿ, ಧನ್ಯವಾದವಿತ್ತರು.

## ಸೇವಾಭಾರತಿ ಸಂಸ್ಥೆಯ ವರ್ಷವಾರು ವಿಶ್ಲೇಷಣೆ


1. 2018–2019




2. 2019–2020




3. 2020–2021





**ವರ್ಷದಿಂದ ವರ್ಷಕ್ಕೆ ಹೋಲಿಸಿದರೆ ಸೆಲ್ಫ್‌ಕೇರ್ ಕಿಟ್‌ಗಳ ವಿತರಣೆಯಲ್ಲಿ ಏರಿಕೆ ಕಂಡಿದ್ದು, ಅತಿಹೆಚ್ಚು ಹೊಸ ಉಪಕರಣಗಳ ವಿತರಣೆಯಲ್ಲಿ ಏರಿಕೆಯಾಗಿರುವುದು ಸಂಸ್ಥೆಯ ಹೆಮ್ಮೆ ಹಾಗೂ ಸಿಬ್ಬಂದಿಗಳ ಮತ್ತು ದಾನಿಗಳ ಸಹಕಾರವನ್ನು ನಾವು ಸ್ಮರಿಸುತ್ತೇವೆ.**

## ಸೇವಾ ಸಂಗಮ


## ಆನ್‌ಲೈನ್ ಕಾರ್ಯಗಾರ



ಮಾರ್ಚ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸೇವಾಧಾಮದ ಫಿಸಿಯೋಥೆರಪಿಸ್ಟ್ ಶೈಲಾ ಕೆ. ಬೆನ್ನುಹುರಿ ಅಪಘಾತದ ತೊಂದರೆಗಳು ಹಾಗೂ ನಿರ್ವಹಣೆ ಬಗ್ಗೆ ಬೆನ್ನುಹುರಿ ದಿವ್ಯಾಂಗರಿಗೆ ಮಾಹಿತಿಯಿತ್ತರು. ಕಾರ್ಯಗಾರದಲ್ಲಿ ಒಟ್ಟು 51 ಜನ ಭಾಗವಹಿಸಿದ್ದರು.

4. 2021–22




**ಸೆಲ್ಫ್ ಕೇರ್ ಕಿಟ್ : ಯೂರಿನ್ ಬ್ಯಾಗ್, ಕ್ಯಾತೆಟರ್, ಜೆಲ್ ಹೋಮ್ ಆಕ್ಸಿಸಿಬಿಲಿಟಿ : ರ್‍ಯಾಂಪ್ ನಿರ್ಮಾಣ, ಶೌಚಾಲಯ ನಿರ್ಮಾಣ**

*The world worries about disability more than disabled people do*

# ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಸಂದರ್ಶಕರ ಅನಿಸಿಕೆಗಳು

1. You're doing a great job in not just treating the injured but giving their. Life and Spirit back! Keep Up the Great Work

   - Mr. Shiva Prasad E S

2. ಬದುಕೇ ಇನ್ನೇನು ಮುಗಿಯಿತು ಎಂದು ನಿರಾಶೆಯಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದ ಜನರಿಗೆ ಈ ಸೇವಾಧಾಮವು ಆಶ್ರಯವಾಗಿ ನಿಂತು ನಾವು ಕೂಡ ಬಾಕಿಯವರಂತೆ ಉತ್ತಮ ಬದುಕನ್ನು ನಡೆಸುವಲ್ಲಿ ಸಹಕಾರಿಯಾಗಿರುವುದು ಬಹಳ ಮೆಚ್ಚುಗೆಯ ಕೆಲಸವಾಗಿದೆ. ಸೇವಾಭಾರತಿಯ ಸೇವೆಗೆ ಸದಾ ಬೆನ್ನುಲುಬಾಗಿ ಸರಕಾರವು ನಿಲ್ಲಬೇಕಾಗಿದೆ.

   – ಶ್ರೀಮತಿ ಯಶೋದಾ ಕೇಶವ

## ಫೆಬ್ರವರಿ ತಿಂಗಳ ಸೇವಾ ಕಾರ್ಯಗಳು

| | |
|---|---|
| 1. ಗಾಲಿಕುರ್ಚಿ ವಿತರಣೆ | – 6 |
| 2. ವಾಕರ್ ವಿತರಣೆ | – 1 |
| 3. ಸೆಲ್ಫ್ ಕೇರ್ ಕಿಟ್ | –27 |
| 4. ರ್‍ಯಾಂಪ್ | – 7 |

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our charactes... not destroy us*

# ಜೀವನದಲ್ಲಿ ಅನಿರೀಕ್ಷಿತ ತಿರುವು ಬಂದಾಗ ನೆರವಾದ ಗಣಕಯಂತ್ರ

## ತಂತ್ರಜ್ಞಾನದ ಕೌಶಲ್ಯ: ನಿಶಾಂತ್ ಅಜ್ಜಾವರರ ಛಲದ ಕಥೆ



**ಕ್ರೀಡಾ ಕ್ಷೇತ್ರದಲ್ಲಿ ತಮ್ಮದೇ ಆದ ಸಾಧನೆಯನ್ನು ಮಾಡುತ್ತಾ ಹಲವಾರು ಪದಕಗಳನ್ನು ಗೆದ್ದು ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಮುಂದಿನ ಬದುಕಿನ ಕನಸನ್ನು ಕಟ್ಟಿದ್ದ ಹುಡುಗನ ಜೀವನದಲ್ಲಿ ಆದ ಒಂದು ಅಪಘಾತದಿಂದಾಗಿ ಬೆನ್ನುಹುರಿ ಅಪಘಾತ ಕ್ಕೊಳಗಾದ ಹುಡುಗ ನಿಶಾಂತ್ ಅಜ್ಜಾವರ ಇವರ ಯಶೋಗಾಥೆ.**

ನಿಶಾಂತ್ ಡಿ.ಎಸ್. 1994ರ ಜನವರಿ 1 ರಂದು ಸುಳ್ಯದ ಅಜ್ಜಾವರದಲ್ಲಿ ಜನಿಸಿದರು. ಇವರು ಎಲ್ಲರಂತೆ ಸಾಮಾನ್ಯ ಜೀವನವನ್ನು ನಡೆಸುತ್ತಿದ್ದರು. ಸುಳ್ಯದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2015 ರಲ್ಲಿ ತಮ್ಮ ಬಿ.ಎ. ಪದವಿ ಮುಗಿಸಿದರು. ಇವರು ಶಿಕ್ಷಣದಲ್ಲಿ ಮಾತ್ರವಲ್ಲದೆ ಕ್ರೀಡಾ ಕ್ಷೇತ್ರದಲ್ಲೂ ಅಪಾರ ಸಾಧನೆಯನ್ನು ಮಾಡಿದ್ದರು. ವಾಲಿಬಾಲ್, ಕಬಡ್ಡಿ, 200 ಮೀಟರ್ ಓಟ, ಉದ್ದ ಜಿಗಿತ, ಎತ್ತರ ಜಿಗಿತ ಕ್ರೀಡೆಗಳಲ್ಲಿ ಪರಿಣಿತಿಯನ್ನು ಹೊಂದಿದ್ದು ಹಲವಾರು ಪದಕಗಳನ್ನು ಪಡೆದಿರುತ್ತಾರೆ. ಇಷ್ಟಲ್ಲದೆ ತಮ್ಮ ಪದವಿ ಶಿಕ್ಷಣದ ಸಮಯದಲ್ಲಿ ಕಾಲೇಜಿನ ಕ್ರೀಡಾ ಕಾರ್ಯದರ್ಶಿಯಾಗಿದ್ದರು.

ಹೀಗೆ ಕ್ರೀಡಾಕ್ಷೇತ್ರದಲ್ಲಿ ಸಾಧನೆಯನ್ನು ಮಾಡುತ್ತಿದ್ದ ಕಾರಣ ತಮ್ಮ ಪದವಿ ಶಿಕ್ಷಣದ ಬಳಿಕ ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಮಾಡಲು ಮಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಬಿಪಿ.ಎಡ್ ಮಾಡಬೇಕೆಂದು ನಿರ್ಧರಿಸಿ ರಜಾ ದಿನಗಳಲ್ಲಿ ದುಡಿದರೆ ಮುಂದಿನ ಶಿಕ್ಷಣಕ್ಕೆ ಸಹಾಯ ವಾಗುತ್ತದೆಂದು ಫೋರಮ್ ಮಾಲ್‌ನಲ್ಲಿ ಉದ್ಯೋಗ ಪ್ರಾರಂಭಿಸಿದರು.

2018ರ ಸಮಯದಲ್ಲಿ ಫೋರಮ್ ಮಾಲ್‌ನಲ್ಲಿ ಉದ್ಯೋಗ ನಡೆಸುತ್ತಿದ್ದಾಗ ಒಂದು ದಿನ ತಮ್ಮ ತಂದೆಯ ಅನಾರೋಗ್ಯದ ಬಗ್ಗೆ ತಿಳಿದು ಆಸ್ಪತ್ರೆಗೆ ದಾಖಲು ಮಾಡಲು ಮಂಗಳೂರಿನಿಂದ ಸುಳ್ಯಕ್ಕೆ ಬಂದರು. ಮರಳಿ ಹೋಗುವಾಗ ಸೋಣಂಗೆರಿಯಲ್ಲಿ ಅಪಘಾತಕ್ಕೊಳಗಾದರು. ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದ ಕಾರಣ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು.

ಚಿಕಿತ್ಸೆ ಪಡೆದ ನಂತರ ಒಂದು ತಿಂಗಳ ಕಾಲ ಮನೆಯಲ್ಲೇ ಇದ್ದರು. ನಂತರ ಮುಂದಿನ ಚಿಕಿತ್ಸೆಗಾಗಿ ಉಜಿರೆಗೆ ಬಂದು ಒಂದು ವರ್ಷಗಳ ಕಾಲ ಹಳ್ಳಿ ಮದ್ದು ಮಾಡಿದರು. ಯಾವುದೇ ಧನಾತ್ಮಕ ಬದಲಾವಣೆಯಿಲ್ಲದ ಕಾರಣ ಪುನಃ ಮನೆಗೆ ಮರಳಿ ಬಂದರು. ಬೆನ್ನುಹುರಿ ಅಪಘಾತಕ್ಕೊಳಗಾದ ಕಾರಣ ಯಾವುದೇ ದೈನಂದಿನ ಕಾರ್ಯಗಳನ್ನು ಮಾಡಲು ಇನ್ನೊಬ್ಬರ ಸಹಾಯ ಬೇಕಾಗಿತ್ತು. ಕೊನೆಗೆ ಹೀಗೆ ಕುಳಿತರೆ ಸಾಧ್ಯವಿಲ್ಲವೆಂದು ನಿರ್ಧರಿಸಿ ಯೂಟ್ಯೂಬ್ ಸಹಾಯದಿಂದ ಚಿತ್ರ ಬಿಡಿಸಲು ಕಲಿತರು. ಚಿತ್ರಕಲೆಯನ್ನೇ ತಮ್ಮ ವೃತ್ತಿಯಾಗಿ ಪ್ರಾರಂಭಿಸಿ 1 ಭಾವಚಿತ್ರಕ್ಕೆ ತಲಾ ರೂ. 300 ರಂತೆ ಮಾರಾಟ ಮಾಡಲು ಪ್ರಾರಂಭಿಸಿದರು.

ಹೀಗೆ ಜೀವನ ಸಾಗುತ್ತಿದ್ದ ಸಂದರ್ಭದಲ್ಲಿ 2019ರ ಸಮಯದಲ್ಲಿ ಸೇವಾಧಾಮದ ಕ್ಷೇತ್ರ ಸಂಯೋಜಕರಿಂದ ಪುನಶ್ಚೇತನ ಕೇಂದ್ರದ ಬಗ್ಗೆ ತಿಳಿದು ಪುನಶ್ಚೇತನಕ್ಕಾಗಿ ಸೇವಾಧಾಮಕ್ಕೆ ಬಂದರು. ಇಲ್ಲಿ 3 ತಿಂಗಳ ಕಾಲ ಪುನಃ ಚೇತರಿಸಿಕೊಂಡರು. ಮೊದಲು ದೈನಂದಿನ ಚಟುವಟಿಕೆ ನಿರ್ವಹಣೆಗೆ ಇನ್ನೊಬ್ಬರ ಸಹಾಯ ಪಡೆದುಕೊಳ್ಳುತ್ತಿದ್ದವರು ತಾವೇ ತಮ್ಮ ದಿನನಿತ್ಯದ ಕಾರ್ಯಗಳನ್ನು ಮಾಡಿಕೊಳ್ಳುವಷ್ಟು ಸಮರ್ಥರಾದರು.

ನಂತರ ರೆಡ್ಡಿಸ್ ಫೌಂಡೇಶನ್‌ನ ಸಹಾಯದಿಂದ ಕಂಪ್ಯೂಟರ್ ತರಬೇತಿ ಹಾಗೂ ಸಂದರ್ಶನವನ್ನು ಹೇಗೆ ಎದುರಿಸಬೇಕೆಂಬ ಕೌಶಲ್ಯದ ತರಬೇತಿ ಪಡೆದುಕೊಂಡ ಬಳಿಕ ಫ್ಲಿಪ್ ಕಾರ್ಟ್‌ನಲ್ಲಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. ಬೆನ್ನುಹುರಿ ಅಪಘಾತದಿಂದ ದಿನವಿಡೀ ಕುಳಿತು ಕೆಲಸ ಮಾಡಲು ಕಷ್ಟವಾಗುತಿದ್ದ ಕಾರಣ ಫ್ಲಿಪ್ ಕಾರ್ಟ್‌ನಲ್ಲಿ ಉದ್ಯೋಗ ತ್ಯಜಿಸಿ ಜಿಯೋ ಮಾರ್ಟ್‌ನಲ್ಲಿ ಸಪೋರ್ಟಿವ್ ಏಜೆಂಟ್ ಆಗಿ ಉದ್ಯೋಗ ಪ್ರಾರಂಭಿಸಿದರು. ಸೂಕ್ತ ತರಬೇತಿ ಪಡೆದ ನಂತರ ಈಗ ಪ್ರಸ್ತುತ ಜಿಯೋ ಮಾರ್ಟ್‌ನಲ್ಲಿ ಬ್ರಾಂಚ್ ಟೀಮ್ ಲೀಡರ್ ಆಗಿ ದುಡಿಯುತ್ತಾ ಮಾಸಿಕವಾಗಿ ರೂ. 10000–12000ದಷ್ಟು ಸಂಪಾದನೆ ಮಾಡುತ್ತಿದ್ದಾರೆ.

ಇವರು ಸೇವಾಭಾರತಿ–ಸೇವಾಧಾಮದ ವತಿಯಿಂದ ಗಾಲಿಕುರ್ಚಿ, ಶೌಚಾಲಯ ನಿರ್ಮಾಣ ಹಾಗೂ ರ‍್ಯಾಂಪ್ ನಿರ್ಮಾಣದ ಸೌಲಭ್ಯವನ್ನು ಪಡೆದಿರುತ್ತಾರೆ. ಅದಲ್ಲದೆ ತಮ್ಮ ಉದ್ಯೋಗಕ್ಕಾಗಿ ಲ್ಯಾಪ್ ಟಾಪ್ ಅನ್ನು ಪಡೆದಿರುತ್ತಾರೆ. ಹೀಗೆ ಬೆನ್ನು ಹುರಿ ಅಪಘಾತ ಕ್ಕೊಳಗಾಗಿದ್ದರೂ ಛಲ ಬಿಡದೆ ಸಾಧನೆಯನ್ನು ಮಾಡುತ್ತ ತಮ್ಮ ಜೀವನವನ್ನು ಸಂತೋಷದಿಂದ ಸಾಗಿಸುತ್ತಿದ್ದಾರೆ.

*Life would be tragic if it weren't funny*